<u>ದಿನಾಂಕಃ 17-01-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಅರ್ಜಿದಾರ ಪರಃ ಶ್ರೀ ಜೆ.ಕೆ.ಎಸ್. ವಕೀಲರಿಂದಃ-</u>

ನಾನು ಈ ಅರ್ಜಿಯಲ್ಲಿ ಅರ್ಜಿದಾರನಾಗಿದ್ದು ನನ್ನ ಮುಖ್ಯ ವಿಚಾರಣೆ ಬಾಬ್ತು ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು ಅದರಲ್ಲಿ ಹೇಳಿರುವ ಸಂಗತಿಗಳು ಸತ್ಯವಾಗಿದ್ದು ಅದರ ಒಕ್ಕಣೆಯನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಪ್ರಮಾಣ ಪತ್ರದ ಮೇಲೆ ಇರುವ ಸಹಿ ನನ್ನದಾಗಿದ್ದು ಅದರ ಒಕ್ಕಣೆಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸಿದ್ದೇನೆ.

ಆದ್ದರಿಂದ ನಾನು ಮಧ್ಯಂತರ ಅರ್ಜಿ ಸಂಖ್ಯೆ:1 ರಲ್ಲಿ ಕೋರಿದಂತೆ ಆದೇಶ ಮಾಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

<u>ಪಾಟೀ ಸವಾಲುಃ 4 ನೇ ಎದುರುದಾರ ಪರಃ ಶ್ರೀಮತಿ ಡಿ.ಎಸ್.ಎಂ. ವಕೀಲರಿಂದಃ-</u>

ಪೊಲೀಸರು ಅಪಘಾತದ ಸಂಬಂಧ ದೋಷಾರೋಪಣೆ ಪತ್ರ ಸಲ್ಲಿಸಿದ ಕೂಡಲೇ ಪರಿಹಾರಕ್ಕೆ ಅರ್ಜಿ ಸಲ್ಲಿಸಲು ನಿಮಗೇನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ನಾನು ಚಿಕಿತ್ಸೆಯಲ್ಲಿ ಇದ್ದೆ ಎನ್ನುತ್ತಾರೆ. ಈ ಪರಿಹಾರ ಅರ್ಜಿ ಸಲ್ಲಿಸಲು ಸಂಭವಿಸಿರುವ ವಿಳಂಬಕ್ಕೆ ಯಾವುದೇ ಸಕಾರಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನಗೆ ಓಡಾಡಲು ಸಾಧ್ಯವಾಗುತ್ತಿರಲಿಲ್ಲ ಎನ್ನುತ್ತಾರೆ. ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ಈ ಅರ್ಜಿಯನ್ನ ಯಾವುದೇ ಸಕಾರಣ ಇಲ್ಲದೇ ದಾಖಲು ಮಾಡಿದ್ದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ದೋಷಾರೋಪಣೆ

ಪತ್ರ ಸಲ್ಲಿಸಿದ ನಂತರ ಚಿಕಿತ್ಸೆ ಪಡೆಯುತ್ತಿದ್ದೆ ಎಂದು ತೋರಿಸಲು ನ್ಯಾಯಾಲಯದ ಮುಂದೆ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಸೂಕ್ತ ಕಾಲಕ್ಕೆ ಪರಿಹಾರ ಅರ್ಜಿಯನ್ನ ದಾಖಲು ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 3 ನೇ ಎದುರುದಾರ ಪರಃ ಶ್ರೀ ಹೆಚ್.ಎನ್.ಆರ್. ವಕೀಲರಿಂದಃ-

4 ನೇ ಎದುರುದಾರ ಪರ ವಕೀಲರು ಮಾಡಲಾದ ಪಾಟೀ ಸವಾಲನ್ನ ಅಳವಡಿಸಿಕೊಂಡಿರುತ್ತಾರೆ.

ಮರು ಸವಾಲುಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಎಂ.ಎ.ಸಿ.ಟಿ., ಚಿಕ್ಕಮಗಳೂರು.

ಎಸ್ಆರ್ಃ